NOVEMBER 30, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಮಂಗಳೂರಿನ ಪಿಲಿಕುಳದ, ಶಿವರಾಮ ಕಾರಂತ ನಿಸರ್ಗಧಾಮದ ಅಭಿವೃದ್ಧಿಗೆ ಕ್ರಮ – ಎನ್.ಎಸ್. ಬೋಸರಾಜು.
- ವಾಹನ ನಿಬಿಡ ಸ್ಥಳಗಳಲ್ಲಿ ಬಿದಿರು ಬೆಳೆಸಿ, ಇಂಗಾಲದ ದುಷ್ಪರಿಣಾಮ ತಡೆಯಲು ಚಿಂತನೆ – ಈಶ್ವರ ಖಂಡ್ರೆ.
- ಉತ್ತರಕನ್ನಡ ಜಿಲ್ಲೆ ಶಿರಸಿಯ, ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ಶ್ಲಾಘಿಸಿದ, ಅರುಣಾಚಲ ಪ್ರದೇಶದ ಕೃಷಿ ಮಂತ್ರಿ ಗೇಬ್ರಿಯಲ್ ವಾಂಗ್ಸು.
- ಅಂಗಾಂಗ ದಾನದ ಪ್ರತಿಜ್ಞೆ; ಧಾರವಾಡ ಜಿಲ್ಲೆ, ದೇಶಕ್ಕೆ ಮೂರನೇ ಸ್ಥಾನ.

<><><>

ಈಗ ವಾರ್ತೆಗಳ ವಿವರ

<><><>

ಮಂಗಳೂರಿನ ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮವನ್ನು 'ಅಮ್ಯೂಸ್‌ಮೆಂಟ್ ಪಾರ್ಕ್' ಆಗಿ, ಅಭಿವೃದ್ಧಿ ಪಡಿಸಲು, ಚಿಂತನೆ ನಡೆದಿದೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ವಿಕಾಸಸೌಧದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು. ಮುಖ್ಯಮಂತ್ರಿಯವರು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಸಮಿತಿ ಅನುಮೋದಿಸಿದ್ದಾರೆ. ಸದ್ಯದಲ್ಲೇ ಪ್ರಾಧಿಕಾರದ ಮೊದಲ ಸಭೆ ಜರುಗಲಿದ್ದು, ಪಿಲಿಕುಳ ನಿಸರ್ಗ ಧಾಮದ ನೀಲನಕ್ಷೆ ಸಿದ್ಧವಾಗಲಿದೆ, ಎಂದರು. ರಾಯಚೂರು, ಚಿಕ್ಕಮಗಳೂರು ಹಾಗೂ ಯಾದಗಿರಿಯಲ್ಲಿ ಹೊಸದಾಗಿ ನಿರ್ಮಿಸುತ್ತಿರುವ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾಮಗಾರಿಯನ್ನು, ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಚಿವರು ಸೂಚಿಸಿದರು.

<><><>

ವಾಹನ ನಿಬಿಡ ಸ್ಥಳಗಳಲ್ಲಿ ಬಿದಿರು ಬೆಳೆಸಿದರೆ, ಇಂಗಾಲದ ಹೊರ ಸೂಸುವಿಕೆಯಿಂದ ಆಗಬಹುದಾದ ದುಷ್ಪರಿಣಾಮ ತಡೆಯಬಹುದು. ಅರಣ್ಯ ಇಲಾಖೆ ಈ ನಿಟ್ಟಿನಲ್ಲಿ ಚಿಂತನೆ ನಡೆಸಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ದೇಶದ ಮೊಟ್ಟ ಮೊದಲ, ವಿಶೇಷ ಬಿದಿರು ವಸ್ತು ಪ್ರದರ್ಶನದ ಗ್ಯಾಲರಿಯನ್ನು ಉದ್ಘಾಟಿಸಿ, ಮಾತನಾಡಿದರು.

ಬಿದಿರು ಅರಣ್ಯ ಸಂಪತ್ತು. ಹುಲ್ಲಿನ ಜಾತಿಗೆ ಸೇರಿದ್ದು, ಇಂಗಾಲವನ್ನು ಹೀರಿಕೊಂಡು, ನಗರ ವಾಸಿಗಳಿಗೆ ಪ್ರಾಣವಾಯು ಹೆಚ್ಚು ಸೂಸುತ್ತದೆ. ಬಿದಿರು ಆನೆಗಳಿಗೆ ಪ್ರಿಯವಾದ ಆಹಾರ ಹಾಗೂ ಕಾಡಿನ ನೈಸರ್ಗಿಕ ತಡೆಗೋಡೆಯಾಗಿಯೂ ಬಳಸಬಹುದು ಎಂದರು.

<><><>

ಅರುಣಾಚಲಪ್ರದೇಶ ರಾಜ್ಯದ, ಕೃಷಿ ಹಾಗೂ ತೋಟಗಾರಿಕೆ ಖಾತೆ ಸಚಿವ ಗೇಬ್ರಿಯಲ್ ಡೆನ್ವಾಂಗ್ ವಾಂಗ್ಸು ಅವರು, ಉನ್ನತಾಧಿಕಾರಿಗಳ ತಂಡದ ಜೊತೆ, ಉತ್ತರಕನ್ನಡ ಜಿಲ್ಲೆಯ ಶಿರಸಿಗೆ ಭೇಟಿ ನೀಡಿ, ಮಲೆನಾಡಿನ ಅಡಕೆ ತೋಟಗಳನ್ನು ವೀಕ್ಷಿಸಿದರು. ಅಡಕೆ, ಸಂಬಾರ ಬೆಳೆಗಳು, ಸಾಂಪ್ರದಾಯಿಕ ಕೃಷಿ ವೈವಿಧ್ಯ, ಮಲೆನಾಡಿನ ಸುಸ್ಥಿರ ಅಭಿವೃದ್ಧಿ ಪ್ರಯೋಗಗಳ ಬಗ್ಗೆ, ರೈತರ ಜೊತೆ ಸಂವಾದ ನಡೆಸಿದರು. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶಿರಸಿಯ ಕದಂಬ ಮಾರ್ಕೇಟಿಂಗ್ ಸೌಹಾರ್ದ ಸಹಕಾರಿ ನಿಯಮಿತದ ಸಲಹೆಗಾರ, ವಿಶ್ವೇಶ್ವರ ಭಟ್.

<><><>

ವಿಶ್ವೇಶ್ವರ ಭಟ್ ಧ್ವನಿ 30 ಸೆಕೆಂದುಗಳು

<><><>

ಅಂಗಾಂಗ ದಾನದ ಪ್ರತಿಜ್ಞೆ ಗೈಯ್ಯುವಲ್ಲಿ, ಬಳ್ಳಾರಿ ಜಿಲ್ಲೆ ಮುಂಚೂಣಿಯಲ್ಲಿದೆ. ಧಾರವಾಡ ಜಿಲ್ಲೆ ಇಡೀ ದೇಶಕ್ಕೆ ಮೂರನೇ ಸ್ಥಾನದಲ್ಲಿದೆ. ಬಳ್ಳಾರಿಯಲ್ಲಿ 4 ಸಾವಿರದ 8 ನೂರಾ 16 ಜನ ಹಾಗೂ ಧಾರವಾಡದಿಂದ 3 ಸಾವಿರದ 4 ನೂರಾ 35 ಜನ, ಅಂಗಾಂಗ ದಾನದ ಪ್ರತಿಜ್ಞೆ ಮಾಡಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳ ಸುಪರ್ದಿಯ, ಜಿಲ್ಲಾ ಕಣ್ಗಾವಲು ಘಟಕ, ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ ಸರ್ವೇಕ್ಷಣಾಧಿಕಾರಿ ಪರಶುರಾಮ.

<><><>

ಡಾ. ಪರಶುರಾಮ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಯೋಜನೆ'ಯ ಲಾಭ, ಕರ್ನಾಟಕದ ಜನತೆಗೆ ಖಾತ್ರಿ ತಲುಪುವಂತಾಗಲು, ವಿಶೇಷ ಆದ್ಯತೆ ನೀಡಿ, ಸಾವಿರದ 21 ಕೋಟಿ ರೂಪಾಯಿ ಅನುದಾನ ಒದಗಿಸಲಾಗಿದೆ ಎಂದು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಜೆ.ಪಿ.ನಡ್ಡಾ, ತಿಳಿಸಿದ್ದಾರೆ. ಲೋಕಸಭೆಯ ಕಲಾಪದಲ್ಲಿ, ಮೈಸೂರು ಸಂಸದ ಯದುವೀರ ಒಡೆಯರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕದಲ್ಲಿ 700ಕ್ಕೂ ಅಧಿಕ ಆಯುಷ್ಮಾನ್ ಆರೋಗ್ಯ ಮಂದಿರಗಳ ನಿರ್ಮಾಣ ಹಾಗೂ ಬಲವರ್ಧನೆ ಮತ್ತು 30 ಕೇಂದ್ರೀಕೃತ ಪ್ರಯೋಗಾಲಯಗಳ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ, ಎಂದರು. ಎಲ್ಲ ಜಿಲ್ಲೆಗಳ ಆಯುಷ್ಮಾನ್ ಆರೋಗ್ಯ ಮಂದಿರ ಹಾಗೂ ಘಟಕ ಆರೋಗ್ಯ ಕೇಂದ್ರಗಳನ್ನು ಸುದೃಢಗೊಳಿಸಲು ನಿರ್ಧರಿಸಲಾಗಿದೆ ಎಂದು, ಸಚಿವ ನಡ್ಡಾ ತಿಳಿಸಿದರು. ದೇಶದ ನಾಗರಿಕರಿಗೆ ಉತ್ತಮ ಆರೋಗ್ಯ ಸೇವೆ ಕೈಗೆಟುಕುವ ದರದಲ್ಲಿ ಲಭ್ಯವಾಗಲು PM–ಆಯುಷ್ಮಾನ್ ಆರೋಗ್ಯ ಯೋಜನೆ ಅಡಿ, 17 ಸಾವಿರದ 788 ಆಯುಷ್ಮಾನ್ ಕೇಂದ್ರಗಳನ್ನು ದೇಶಾದ್ಯಂತ ಸಶಕ್ತಗೊಳಿಸಲು ನಿರ್ಧರಿಸಲಾಗಿದೆ ಎಂದರು.

<><><>

108 ಕೋಟಿ 36 ಲಕ್ಷ ರೂಪಾಯಿ ವೆಚ್ಚದಲ್ಲಿ, 254 ನಗರ ಆರೋಗ್ಯ ಕ್ಷೇಮ ಕೇಂದ್ರಗಳು ಹಾಗೂ 39 ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ನಮ್ಮ ಕ್ಲಿನಿಕ್‌ಗಳ ಸ್ಥಾಪನೆಗೆ ಶೀಘ್ರ ಕ್ರಮ ಕೈಗೊಳ್ಳುವುದಾಗಿ, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ಉಡುಪಿ ಮತ್ತು ದಾವಣಗೆರೆ ಜಿಲ್ಲಾ ಆಸ್ಪತ್ರೆಗಳಲ್ಲಿ, 39 ಕೋಟಿ 37 ಲಕ್ಷ ರೂಪಾಯಿ ವೆಚ್ಚದಲ್ಲಿ, 50 ಹಾಸಿಗೆಗಳ ತೀವ್ರ ನಿಗಾ ಆರೈಕೆ ಘಟಕಗಳ ನಿರ್ಮಾಣಕ್ಕೆ ಯೋಜನೆ ಸಿದ್ಧಗೊಂಡಿದೆ. ವಿಜಯಪುರ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಆರೈಕೆ ಘಟಕಕ್ಕೆ ಅಗತ್ಯವಿರುವ ಉಪಕರಣ ಖರೀದಿ ಅನುಮೋದಿಸಲಾಗಿದೆ ಎಂದಿದ್ದಾರೆ.

<><><>

ವಿಜಯನಗರ ಜಿಲ್ಲೆಯ, ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ, ಶ್ರೀ ವಿಜಯ ವಿಠ್ಠಲ ದೇವಸ್ಥಾನದ ಸಂಗೀತ ಮಂಟಪದ, 10 ಕಲ್ಲಿನ ಕಂಬಗಳಿಗೆ, ಕ್ವಿಕ್ ರೆಸ್ಪಾನ್ಸ್ ಕೋಡ್ ಅಳವಡಿಸಲಾಗಿದೆ. ಸ್ಮಾರ್ಟ್ ಫೋನ್ ಕ್ಯೂ.ಆರ್. ಕೋಡ್ ಸ್ಕ್ಯಾನರ್ ಬಳಸಿ, ಸಂಗೀತ ಸ್ವರ ಆಲಿಸಬಹುದು. ಸಂಗೀತ ಹೊರ ಸೂಸುವ ಕಂಬಗಳನ್ನು ಪ್ರವಾಸಿಗರು ನಿರಂತರ ತಟ್ಟಿದಲ್ಲಿ, ಶಿಥಿಲಗೊಳ್ಳುವ ಸಾಧ್ಯತೆ ಇದ್ದು, ಎಲ್ಲ 46 ಕಂಬಗಳಿಗೂ ಕ್ಯೂ.ಆರ್. ಕೋಡ್ ಅಳವಡಿಸುವ ಕಾರ್ಯ ಶೀಘ್ರ ಪೂರ್ಣಗೊಳ್ಳಲಿದೆ ಎಂದು, ಹಂಪಿ–ವಿಜಯನಗರ ವೃತ್ತದ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿರ್ದೇಶಕ ನಿಹಿಲ್ ದಾಸ್ ತಿಳಿಸಿದ್ದಾರೆ. ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ಸಂಘದ ಪ್ರಧಾನ ಕಾರ್ಯದರ್ಶಿ, ವಿರೂಪಾಕ್ಷಿ ಹಂಪಿ ಅವರು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ವಿರೂಪಾಕ್ಷಿ ಹಂಪಿ ಧ್ವನಿ 35 ಸೆಕೆಂದುಗಳು

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, '69ನೇ ಕರ್ನಾಟಕ ರಾಜ್ಯೋತ್ಸವ ಮತ್ತು ಕರ್ನಾಟಕ ನಾಮಕರಣ; 50ರ ಸಂಭ್ರಮ' ಹಾಗೂ 'ನಾಡ ಹಬ್ಬ' ಕಾರ್ಯಕ್ರಮಗಳ, ಸಮಾರೋಪ ಸಮಾರಂಭ ಇಂದು ಮಧ್ಯಾಹ್ನ 12ಕ್ಕೆ ಜರುಗಲಿದೆ. ವಿದ್ಯಾವರ್ಧಕ ಸಂಘದ ಮುಖವಾಣಿ, ವಾಗ್ಭೂಷಣ ಪತ್ರಿಕೆ ಬಿಡುಗಡೆಗೊಳ್ಳಲಿದೆ.

<><><>

ಈ ಬೆಳಗ್ಗೆ 10:30ಕ್ಕೆ 'ಧರೆಗೆ ದೊಡ್ಡವರು' ಕಾರ್ಯಕ್ರಮದಲ್ಲಿ, ಹಿರಿಯ ಲೇಖಕ, ಡಾಕ್ಟರ್ ಬರಗೂರು ರಾಮಚಂದ್ರಪ್ಪ ಅವರ, ಬದುಕು–ಬರೆಹ ಕುರಿತು, ವಿಚಾರ ಸಂಕಿರಣ ಜರುಗಲಿದೆ.

<><><>

ಸೀಳು ತುಟಿ, ಅಂಗುಳ ಮತ್ತು ವಸಡು ಹಾಗೂ ಸುಟ್ಟ ಗಾಯಗಳಿಂದ ಉಂಟಾದ ವಿರೂಪಗಳ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರ, ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ ಬಿ.ಜಿ.ನಗರದ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ, ನಾಳೆ ಡಿಸೆಂಬರ್ 1 ರಿಂದ 13ರ ವರೆಗೆ, ನಡೆಯಲಿದೆ. 3 ತಿಂಗಳು ಮೇಲ್ಪಟ್ಟವರಿಗೆ, ರೋಟೋಪ್ಲಾಸ್ಟ್ ಇಂಟರ್‌ನ್ಯಾಷನಲ್ ವತಿಯಿಂದ, ಅಮೆರಿಕದ 30 ತಜ್ಞ ವೈದ್ಯರ ತಂಡ, ಉಚಿತವಾಗಿ ಶಸ್ತ್ರ ಚಿಕಿತ್ಸೆ ನಡೆಸಲಿದೆ.

<><><>

6ನೇ ರಾಜ್ಯ ಮಟ್ಟದ, 16 ವರ್ಷದೊಳಗಿನ, ಸಬ್ ಜ್ಯೂನಿಯರ್ ಬಾಲಕ, ಬಾಲಕಿಯರ ನೆಟ್‌ಬಾಲ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಇಂದು ಮತ್ತು ನಾಳೆ, ಬೆಂಗಳೂರಿನ ದಾಬಸ್‌ಪೇಟೆಯ ಶಿವಗಂಗಾ ಕ್ಷೇತ್ರದಲ್ಲಿ ಆಯೋಜಿತವಾಗಿದೆ. ನೆಟ್‌ಬಾಲ್ ಅಸೋಸಿಯೇ ನ್ ಅಧ್ಯಕ್ಷ ಅಬ್ದುಲ್ ರಜಾಕ್ ಟೇಲರ್ ಹಾಗೂ ಕಾರ್ಯಾಧ್ಯಕ್ಷ ಮಂಜುನಾಥ ಗೊಂಡಬಾಳ, ಕೊಪ್ಪಳದಲ್ಲಿ ಈ ಮಾಹಿತಿ ನೀಡಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯನ್ನು, ಡಿಸೆಂಬರ್ 28 ರಂದು, ಬೆಳಗಾವಿಯಲ್ಲಿ ಆಯೋಜಿಸುವ ಕುರಿತು, ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸಿದ್ದಾಗಿ, ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ. ಶಿವಕುಮಾರ ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ.

<><><>

ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಬಗ್ಗೆ, ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ, ಧ್ವನಿ ಎತ್ತುವುದಾಗಿ, ವಿಧಾನಸಭೆ ವಿಪಕ್ಷ ಉಪ ನಾಯಕ, ಅರವಿಂದ ಬೆಲ್ಲದ ತಿಳಿಸಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಸಾವಿರದ 537 ಕಟ್ಟಡ ಕಾರ್ಮಿಕರ ನಕಲಿ ಕಾರ್ಡ್‌ಗಳನ್ನು ರದ್ದು ಪಡಿಸಿದ್ದಾಗಿ, ಕಾರ್ಮಿಕ ಇಲಾಖೆ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಂಗಳೂರಿನ ಪಿಲಿಕುಳದ, ಶಿವರಾಮ ಕಾರಂತ ನಿಸರ್ಗಧಾಮದ ಅಭಿವೃದ್ಧಿಗೆ ಕ್ರಮ – ಎನ್.ಎಸ್. ಬೋಸರಾಜು.
- ವಾಹನ ನಿಬಿಡ ಸ್ಥಳಗಳಲ್ಲಿ ಬಿದಿರು ಬೆಳೆಸಿ, ಇಂಗಾಲದ ದು ಪರಿಣಾಮ ತಡೆಯಲು ಚಿಂತನೆ – ಈಶ್ವರ ಖಂಡ್ರೆ.
- ಉತ್ತರಕನ್ನಡ ಜಿಲ್ಲೆ ಶಿರಸಿಯ, ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ಶ್ಲಾಘಿಸಿದ, ಅರುಣಾಚಲ ಪ್ರದೇಶದ ಕೃಷಿ ಮಂತ್ರಿ ಗೇಬ್ರಿಯಲ್ ವಾಂಗ್ಸು.
- ಅಂಗಾಂಗ ದಾನದ ಪ್ರತಿಜ್ಞೆ: ಧಾರವಾಡ ಜಿಲ್ಲೆ, ದೇಶಕ್ಕೆ ಮೂರನೇ ಸ್ಥಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>